ಶ್ರೀ ಎಂ. ರಾಜಶೇಖರ ಮೂರ್ತಿ : ಸುಮಾರು 8 ಜನರು ಇಲ್ಲ ಅನಾಥರೈಸ್ ಆಗಿ ಆಕ್ಯುಪೈ ಮಾಡಿಕೊಂಡಿದ್ದಾರೆ. ಅದರಲ್ಲಿ ಲಿಕ್ಕರ್ ಶಾಪ್‌ನವರು ಒಬ್ಬರಾಗಿದ್ದಾರೆ. ಯಾರ್ಯಾರು ಅನಾಥರೈಸ್ಡ್ ಆಕ್ಯುಪೇಷನ್ ಮಾಡಿಕೊಂಡಿದ್ದಾರೆ ಅವರದೆಲ್ಲವನ್ನು ಎಕ್ಟ್ ಮಾಡಿಸುತ್ತೇವೆ ಎಂದು ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಅದರಲ್ಲಿ ಅವರೂ ಒಬ್ಬರು ಸೇರಿದ್ದಾರೆ.

ಉಪಾಧ್ಯಕ್ಷಣಿಯವರು : ಸಂಖ್ಯೆ 381 ಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಈಗ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಪುನಃ ಅವರು ಬಂದಮೇಲೆ ನಿಮ್ಮನ್ನು ಕರೆಯುತ್ತೇನೆ.

ಕೃಷಿ ಗ್ರಾಮೀಣ ಪತ್ತು ವಿಮೋಚನಾ ಸೌಲಭ್ಯದ ಮೊತ್ತ.

981 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯ ಪ್ರಕಾರ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ನೀಡಿದ ಸೌಲಭ್ಯದ ಮೊತ್ತವೆಷ್ಟು?

ಆ) ಸರ್ಕಾರವು ಮೊತ್ತವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದೆಯೇ?

ಇ) ಇಲ್ಲದಿದ್ದಲ್ಲಿ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು? ಮತ್ತು ಬಿಡುಗಡೆಯಾಗಲು ಬಾಕಿ ಇರುವ ಮೊತ್ತದ ಮೇಲೆ ಬಡ್ಡಿಯನ್ನು ಯಾರು ಭರಿಸುತ್ತಾರೆ. ಮತ್ತು ಇದನ್ನು ಬಡ್ಡಿಯೊಂದಿಗೆ ಸಂಪೂರ್ಣವಾಗಿ ಎಂದು ಪಾವತಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆ ಪ್ರಕಾರ ನೀಡಲಾದ ಸೌಲಭ್ಯದ ಮೊತ್ತ ರೂ.134.05 ಕೋಟಿಗಳಾಗಿರುತ್ತದೆ.

ಆ) ಇಲ್ಲ.

ಇ) ಬಿಡುಗಡೆಯಾಗಲು ಬಾಕಿ ಇರುವ ಮೊತ್ತ ರೂ. 34.60ಕೋಟಿಗಳಾಗಿರುತ್ತದೆ. ಸದರಿ ಬಾಕಿ ಇರುವ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಎಂಬುದನ್ನು ಕೇಂದ್ರ ಸರ್ಕಾರ ನಬಾರ್ಡ್ ತಿಳಿಸಿರುವುದಿಲ್ಲ. ಸರ್ಕಾರವು ಪತ್ರ ಸಂಖ್ಯೆ ಸಿಎಂಡಬ್ಲ್ಯೂ 276 ಸಿಎಲ್‌ಎಸ್ 91, ದಿನಾಂಕ: 1-10-1992ರಲ್ಲಿ ಬಾಕಿ ಇರುವ ಮೊತ್ತವನ್ನು ಜರೂರು ಬಿಡುಗಡೆ ಮಾಡಲು ಕೋರಿರುತ್ತದೆ. ಕೃಷಿ ಮತ್ತು ಗ್ರಾಮೀಣ ಮತ್ತು ವಿಮೋಚನಾ ಯೋಜನೆಯಲ್ಲಿ ಬಡ್ಡಿಯನ್ನು ಭರಿಸುವ ಬಗ್ಗೆ ಉಲ್ಲೇಖ ಇರುವುದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ : ಈ ಉತ್ತರದಲ್ಲಿ ಇನ್ನು 34 ಕೋಟಿ ರೂಪಾಯಿಗಳನ್ನು ನಾವು ಬ್ಯಾಂಕ್‌ಗಳಿಗೆ ಕೊಡಬೇಕೆಂದು ಹೇಳಿದ್ದಾರೆ. ಸುಮಾರು 3 ವರ್ಷವಾಯಿತು. ಕೇಂದ್ರ ಸರ್ಕಾರದಿಂದ ಈ ಹಣ ಬಂದಿದೆಯೋ ಇಲ್ಲವೋ ಇದರ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ. ಮೂರು ವರ್ಷಗಳಿಂದ ರಾಜ್ಯ ಸರ್ಕಾರದವರು ಬ್ಯಾಂಕ್‌ಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಆ ಮೂರು

ವರ್ಷದ ಇಂಟರೆಸ್ಟ್ ಮತ್ತು ಹಣವನ್ನು ಸರ್ಕಾರದವರು ಯಾವಾಗ ಬಿಡುಗಡೆ ಮಾಡುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸ್ಕೀಮ್ ಫಾರ್ಮಲೇಟ್ ಆಗಿದ್ದುದು 13-3-90 ರಲ್ಲಿ ಆಮೇಲೆ ಕರ್ನಾಟಕ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆಟ್ ರಿಲೀಫ್ ಸ್ಕೀಮ್ 1990ರಲ್ಲಿ 10 ಸಾವಿರ ಒಳಗೆ ಸಾಲದ ಲಿಮಿಟ್ ಅವರಿಗೆ ವೇವ್ ಮಾಡುತ್ತೇವೆ ಎನ್ನತಕ್ಕ ಯೋಜನೆ ಕೇಂದ್ರ ಸರ್ಕಾರವರು ಹಾಕಿಕೊಂಡಿದ್ದರು. ಅದರ ಪ್ರಕಾರ ಈಗಾಗಲೇ ನಮಗೆ 134ಕೋಟಿ ರೂಪಾಯಿಯಲ್ಲಿ 100 ಕೋಟಿ ಬಂದಿದೆ. ಇನ್ನು 34 ಕೋಟಿ 60 ಲಕ್ಷ ರೂಪಾಯಿ ಬರಬೇಕಾಗಿದೆ. ಇದರಲ್ಲಿ ಕರ್ನಾಟಕ ಸ್ಟೇಟ್ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕ್‌ಗೆ 24 ಕೋಟಿ 47 ಲಕ್ಷ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಸುಮಾರು 10 ಕೋಟಿ 13 ಲಕ್ಷ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ. ಅದು ಬಂದಕೂಡಲೇ ಎಲ್ಲಾ ಬ್ಯಾಂಕಿಗೆ ಅದೇ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ : ನೀವು ಒಂದು ತಾರೀಖು ಹೇಳಬಹುದು ತಾರೀಖು ಹೇಳಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೇಂದ್ರ ಸರ್ಕಾರದವರು 34 ಕೋಟಿಯನ್ನು ಕೊಟ್ಟಮೇಲೆ ನಾವು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈ ಸರ್ಕಾರದವರು ಅರ್ಧ ಭಾಗ ಕೇಂದ್ರ ಸರ್ಕಾರದವರು ಅರ್ಧ ಭಾಗ ಅದರಲ್ಲಿ ಕೊಡಬೇಕು. ತಮ್ಮ ಸರ್ಕಾರದವರು ಅರ್ಧ ಭಾಗವನ್ನು ಕೊಡುವುದಕ್ಕಾದರೂ ತಯಾರಾಗಿದ್ದೀರಾ?

ಇಷ್ಟು ದಿವಸ ಕೊಡುವುದಿಲ್ಲವೆಂದರೆ, ಬಡ್ಡಿಗಳಿಂದ ಎಲ್ಲಸಂಘ ಸಂಸ್ಥೆಗಳು, ಬ್ಯಾಂಕುಗಳು ಮುಳುಗಿ ಹೋಗುತ್ತಿವೆ ಎಂದು ತಾವೇ ಪ್ರಶ್ನೆ ಹೇಳುವಾಗ ಮೊದಲು ಹೇಳಿದ್ದೀರಿ. ಆದುದರಿಂದ, ದಯವಿಟ್ಟು, ತಮ್ಮ ಭಾಗಕ್ಕೆ ಏನು ಶೇಕಡ 50 ರಷ್ಟು ಹಣ ಬರುತ್ತದೆ, ಅದನ್ನು ಕೊಡುವುದಕ್ಕೆ ತಾವು ತಯಾರಿದ್ದೀರಾ? ಇದಕ್ಕೆ ಬಡ್ಡಿ ಯಾರು ಕೊಡಬೇಕೆಂಬುದರ ಬಗ್ಗೆಯೂ ತಾವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆಯವರೇ, ನಾನು ಮುಂಚೆ ಇದ್ದಂಥ ಯೋಜನೆಯನ್ನು ಏನು ಆಳವಡಿಸಿಕೊಂಡು ಬಂದಿದ್ದೇವೆಯೋ ಅದರ ಪ್ರಕಾರ ನಾವುಮಾಡಬೇಕಾಗುತ್ತದೆಯೇ ಹೊರತು ಬೇರೆ ಯೋಜನೆ ಇದರಲ್ಲಿ ಮಾಡುವುದಕ್ಕಾಗುವುದಿಲ್ಲ. ತಮಗೆ ಈಗಾಗಲೇ ಗೊತ್ತಿರುವ ಹಾಗೆ ರಾಜ್ಯ ಸರ್ಕಾರಕ್ಕೆ ಭಾರತ ಸರ್ಕಾರ ಶೇಕಡ 50 ರಷ್ಟು ಹಣವನ್ನು ಗ್ರಾಂಟ್ ರೂಪದಲ್ಲಿ ಮತ್ತು ಶೇಕಡ 50 ರಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದೆ. ಸಾಲದ ರೂಪದಲ್ಲಿ ಕೊಡತಕ್ಕಂಥ ಹಣವನ್ನು ಮೂರು ಕಂತುಗಳಲ್ಲಿ ವಾಪಸ್ಸು ಕೊಡಬೇಕೆಂದು ಷರತ್ತು ವಿಧಿಸಿದ್ದಾರೆ. ಅದನ್ನು ಕೊಡುವುದೇ ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ಉಳಿದ ಬಡ್ಡಿಯ ಹಣವನ್ನು ನಾವು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ. ಆದರೆ, ಬರತಕ್ಕಂಥ 34 ಕೋಟಿ ರೂಪಾಯಿಗಳು ಏನಿದೆ, ಅದನ್ನು ಮಾತ್ರ ಕೊಡಿಸುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆ.